ಶ್ರೀ ಸಿದ್ದರಾಮಯ್ಯ.—ಕುರಿ ಫಾರಂಗಳು ಹೊಸದುರ್ಗ ಕ್ಷೇತ್ರದಲ್ಲಿ ಯಾವುದೂ ಇಲ್ಲ. ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳು ಹೊಸದುರ್ಗ ಕ್ಷೇತ್ರದಲ್ಲಿ ಮೂವತ್ತರ್ವ ವರ್ಷಗಳಿಂದಲೂ ಜಾರಿಯಲ್ಲಿರತಕ್ಕಂಥದ್ದು ನಿಜ. ಕುರಿ ಉಣ್ಣೆ ಅಭಿವೃದ್ಧಿ ಯೋಜನೆಗಳಿಗೆ ಬಹುಶಃ ಅವರು ಕನ್‌ಫ್ಯೂಸ್ ಮಾಡಿಕೊಂಡಿದ್ದಾರೆ. ಅಲ್ಲಿ ಎಂಟು ಉಣ್ಣೆ ಕೇಂದ್ರಗಳು ಹೊಸದುರ್ಗ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿವೆ. ಇದರ ಉದ್ದೇಶ ಅಲ್ಲಿರತಕ್ಕಂಥ ಹತ್ತು-ಇಪ್ಪತ್ತು ಸಾವಿರ ಕುರಿಗಳು ಇರತಕ್ಕಂಥ ಜಾಗದಲ್ಲಿ ಒಂದು ಸಣ್ಣ ಉಣ್ಣೆ ವಿಸ್ತರಣಾ ಕೇಂದ್ರ ಎಂದು ಮಾಡಿ ಉತ್ತಮ ತಳಿಯ ಟಗರುಗಳನ್ನು ಆ ಕುರಿ ಮಂದೆಯಲ್ಲಿ ಬಿಡತಕ್ಕಂಥದ್ದು. ಅಲ್ಲಿ ಕುರಿಗಳಿಗೆ ಉತ್ತಮ ಆಹಾರ ಒದಗಿಸತಕ್ಕಂಥದ್ದು ಮತ್ತು ವೈಜ್ಞಾನಿಕವಾಗಿ ಉಣ್ಣೆ ತೆಗೆಯತಕ್ಕಂಥದ್ದು. ಈ ರೀತಿ ಕಾರ್ಯಗಳನ್ನು ಎಂಟು ಕೇಂದ್ರಗಳಲ್ಲಿ ಹೊಸದುರ್ಗ ಕ್ಷೇತ್ರದಲ್ಲಿ ಮಾಡುತ್ತಿವೆ. ಹೊಸದುರ್ಗ ಕ್ಷೇತ್ರದಲ್ಲಿ ಒಂದು ಕೇಂದ್ರ ಇದೆ. ಅದರಲ್ಲಿ ಒಬ್ಬರು ಹಿರಿಯ ನಿರ್ದೇಶಕರು ಇರಂತಾರೆ ಮತ್ತು ಬೇರೆ ಬೇರೆ ಕೇಂದ್ರಗಳಲ್ಲಿ ಪಶು ಪರೀಕ್ಷಕರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಕುರಿ ಫಾರಂ ಇಲ್ಲ. ಅಲ್ಲಿರತಕ್ಕಂಥದ್ದು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ ಕಾರ್ಯಕ್ರಮ ನಿಮ್ಮ ತಾಲ್ಲೂಕಿನಲ್ಲಿ ಇದೆ.

ಶ್ರೀ ಜಿ. ರಾಮದಾಸ್.—ಅಲ್ಲಿ ಕುರಿ ಫಾರಂ ಇಲ್ಲದೆ ಉತ್ಪಾದನೆಯೇ ನಡೆಯುತ್ತಿಲ್ಲ. ಷೆಡ್ ಗಳಿಲ್ಲದೇ ಅಲ್ಲಿ ತೊಂದರೆಯಾಗಿದೆ. ಸಚಿವರು ನಮ್ಮ ಕ್ಷೇತ್ರಕ್ಕೆ ಭೇಟಿ ಕೊಟ್ಟು ಅಲ್ಲಿಯ ಪರಿಸ್ಥಿತಿಯನ್ನು ತಿಳಿಯುವುದು ಒಳ್ಳೆಯದು.

ಶ್ರೀ ಸಿದ್ದರಾಮಯ್ಯ.—ಕುರಿ ಫಾರಂನಲ್ಲಿ ಮಾತ್ರ ಕುರಿ ಇಟ್ಟಿರತಕ್ಕಂಥದ್ದು. ಅಲ್ಲಿರತಕ್ಕಂಥ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಯಲ್ಲಿ ಟಗರುಗಳನ್ನು ಕುರಿ ಮಂದೆಯಲ್ಲಿ ಬಿಟ್ಟು ಅದರಿಂದ ಉತ್ತಮ ಮರಿಗಳನ್ನು ಪಡೆಯುವುದು ಆಗಿದೆ. ನಾನು ಅಲ್ಲಿಗೆ ಹೋಗಿ ಅಲ್ಲಿ ಏನಾದರೂ ತೊಂದರೆಗಳು ಇದ್ದರೆ ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡಂತ್ತೇನೆ.

ಪ್ರಶ್ನೆ ಸಂಖ್ಯೆ. ೧೭೮ (೭೨೧)

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಅರಣ್ಯ ಉತ್ಪನ್ನಗಳು.

೭೨೧. ಶ್ರೀ ವಸಂತ ಬಂಗೇರ(ಬೆಳ್ಳಂಗಡಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಬೆಳೆಯುವ ಕಾಡುತ್ಪತ್ತಿಯನ್ನು ಅರಣ್ಯ ಇಲಾಖೆಯವರು ಮಾರಾಟ ಮಾಡುವ ಬಗ್ಗೆ ಅನುಸರಿಸುತ್ತಿರುವ ವಿಧಾನಗಳೇನು ?

ಆ) ಸದರಿ ತಾಲ್ಲೂಕಿನ ಕಾಡುತ್ಪತ್ತಿ ಹರಾಜಿನಿಂದ ಸರ್ಕಾರದ ಬೊಕ್ಕಸಕ್ಕೆ ಒಂದು ವರ್ಷಕ್ಕೆ ಬರುವ ಮೊತ್ತವೆಷ್ಟು ?

ಶ್ರೀ ಜಿ. ಎಸ್. ಬಾಗಲಕೋಟ್(ಅರಣ್ಯ ರಾಜ್ಯ ಮಂತ್ರಿಗಳು).—

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಬೆಳೆಯುವ ಕಾಡುತ್ಪತ್ತಿಯನ್ನು ಗಿರಿಜನರ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರಿ ಸಂಘ (ನಿ) ರವರಿಗೆ (ಲ್ಯಾಂಪ್ಸ್ ಸೊಸೈಟಿ) ಅರಣ್ಯ ಸಂರಕ್ಷಣಾಧಿಕಾರಿಗಳು ನಿಗದಿ ಪಡಿಸಿದ ದರಕ್ಕೆ ಗುತ್ತಿಗೆಗೆ ನೀಡಲಾಗುತ್ತದೆ.

ಆ) ಸದರಿ ಸಹಕಾರಿ ಸಂಘಕ್ಕೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಾಡುತ್ಪತ್ತಿಯ ಗುತ್ತಿಗೆಯಿಂದ ಕೊಡುವುದರಿಂದ ಸರ್ಕಾರಕ್ಕೆ ೧ ವರ್ಷಕ್ಕೆ ಸರಾಸರಿ ರೂ. ೫೦,೦೦೦-೦೦ ಆದಾಯವಿದೆ.

ಶ್ರೀ ವಸಂತ ಬಂಗೇರ.—ಸನ್ಮಾನ್ಯ ಅಧ್ಯಕ್ಷರೇ, ಒಂದನೇ ಪ್ರಶ್ನೆಗೆ ಅರಣ್ಯ ಸಂರಕ್ಷಣಾಧಿಕಾರಿಗಳು ನಿಗಡಿಪಡಿಸಿದ ದರಕ್ಕೆ (ಲ್ಯಾಂಪ್ಸ್ ಸೊಸೈಟಿ)ಗೆ ಗುತ್ತಿಗೆಗೆ ನೀಡಲಾಗುತ್ತದೆ ಎಂದು ಹೇಳಿದ್ದಾರೆ. ಬೆಳ್ತಂಗಡಿಯಲ್ಲಿ ಖಾಸಗಿಯವರು ಕಂಟ್ರಾಕ್ಟ್ ಮಾಡುತ್ತಿದ್ದಾರೆ. ಖಾಸಗಿಯವರು ಹೆಚ್ಚು ಕಂಟ್ರಾಕ್ಟ್‌ನ್ನು ಮಾಡುತ್ತಿದ್ದರೆ ಸಂಬಂಧಪಟ್ಟವರ ಅಧಿಕಾರಿಗಳ ಮೇಲೆ ನೀವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಎರಡನೆಯದಾಗಿ, ಒಂದು ವರ್ಷಕ್ಕೆ ಸರಸಾರಿ ಐವತ್ತು ಸಾವಿರ ರೂಪಾಯಿ ಉತ್ಪತ್ತಿ ಬರಂತ್ತದೆ ಎಂದು ಹೇಳಿದ್ದೀರಿ. ಬೆಳ್ತಂಗಡಿ ತಾಲ್ಲೂಕಿನಲ್ಲಿ ೮೧ ಗ್ರಾಮಗಳು ಕೂಡಿದೆ. ಹೆಚ್ಚು ಸರ್ಕಾರಿ ಕಾಡುಗಳು ಇರುವ ಪ್ರದೇಶ. ಅಲ್ಲಿ ಕೇವಲ ಐವತ್ತು ಸಾವಿರ ರೂಪಾಯಿಗಳಿಗೆ ಗುತ್ತಿಗೆಯನ್ನು ನೀಡಿದ್ದಾರೆ ಎಂದು ಹೇಳಿದರೆ ಇದನ್ನು ನೋಡುವಾಗ ಕಂಟ್ರಾಕ್ಟರುಗಳು, ಸೊಸೈಟಿಯವರು, ಅರಣ್ಯ ಇಲಾಖೆಯ ಅಧಿಕಾರಿಗಳು ಶಾಮೀಲಾಗಿ ಕಡಿಮೆ ಗುತ್ತಿಗೆಗೆ ಅರಣ್ಯ ಉತ್ಪತ್ತಿಯನ್ನು ಮಾರಾಟ ಮಾಡಿದ್ದಾರೆ. ಇದರಿಂದಾಗಿ ಇದೇ ರೀತಿ ಬೇರೆ ಕಡೆ ಕರ್ನಾಟಕ ರಾಜ್ಯದಲ್ಲಿ ಕೋಟಿಗಟ್ಟಲೆ ರೂಪಾಯಿ ಆದಾಯ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ಇದರ ಬದಲಾಗಿ ಬಹಿರಂಗ ಹರಾಜು ಮಾಡಿ ಹೆಚ್ಚು ಮೊತ್ತ ಯಾರು ಕೊಡುತ್ತಾರೆ, ಅವನಿಗೆ ಈ ಕಂಟ್ರಾಕ್ಟನ್ನು ಕೊಟ್ಟರೆ ಸರ್ಕಾರದ ಬೊಕ್ಕಸಕ್ಕೆ ಇದರಿಂದಾಗಿ ಹೆಚ್ಚು ಆದಾಯ ಬರುತ್ತದೆ ಎಂದು ಹೇಳುತ್ತೇನೆ. ಮೂರನೆಯದಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಂಟ್ರಾಕ್ಟರುಗಳು ಸೊಸೈಟಿಯವರು, ಅದೇ ರೀತಿ ಇಲಾಖೆಯ ಅಧಿಕಾರಿಗಳು ಸೇರಿ ಕೊಂಡು ಅಲ್ಲಿ ರೈತರೇ ಬೆಳೆಸಿದ ಮರದಲ್ಲಿ ಕಾಡು ಉತ್ಪತ್ತಿಯನ್ನು ಬಲಾತ್ಕಾರದಿಂದ ಕೊಂಡೊಯ್ಯುತ್ತಿದ್ದಾರೆ ಇನ್ನು ಮುಂದಾದರೂ ಈ ರೀತಿ ರೈತರ ಮೇಲೆ ದಬ್ಬಾಳಿಕೆ ಮಾಡುವುದನ್ನು, ಬಲಾತ್ಕಾರ ಮಾಡುವುದನ್ನು ನಿಲ್ಲಿಸುತ್ತೀರಾ ? ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಎಸ್. ಬಾಗಲ್‌ಕೋಟ್.—ಸನ್ಮಾನ್ಯ ಸಭಾಧ್ಯಕ್ಷರೇ, ಈ ೧೯೭೬ನೇ ಇಸವಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಸುಧಾರಿಸಲಂ ಕಾಡನ್ನು ಕಟ್ಟಬೇಕೆಂದು ನಿರ್ಣಯವಾಗಿದೆ, ಇದು ಯಾವುದೇ ಖಾಸಗಿ ಸಂಸ್ಥೆ ಅಲ್ಲ. ಸಹಕಾರಿ ಸಂಘದಿಂದ ನೊಂದಾಯಿತವಾದ ಸಂಸ್ಥೆ ಈ ಸಂಸ್ಥೆಗೆ ಕೊಡಬೇಕೆಂದು ನಿರ್ಣಯ ೧೯೭೨ರಲ್ಲಿ ಸರ್ಕಾರ ಮಾಡಿದೆ. ಆ ಒಂದು ಸಂಸ್ಥೆಯನ್ನು ಸರ್ಕಾರದವರು ಪರಿಶಿಷ್ಟ ಜನಾಂಗಕ್ಕೆ ಕೊಡಬೇಕೆಂದು ಇದೆ ಅಲ್ಲದೆ ಖಾಸಗಿಯವರಿಗೆ ಕೊಡುವ ಉದ್ದೇಶ ಇಲ್ಲ. ಖಾಸಗಿಯವರಿಗೆ ಎಂದು ಮಾಡಿದ್ದೇವೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ವಿವರ ಕೊಟ್ಟರೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಬಹಿರಂಗ ಹರಾಜು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಬಹಿರಂಗ ಹರಾಜು ಮಾಡುತ್ತೇವೆ ಎನ್ನುವ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ. ಮೂರನೆಯದಾಗಿ, ರೈತರು ಬೆಳೆಸಿದಂತಹ ಮರಗಳನ್ನು ಬಲಾತ್ಕಾರವಾಗಿ ಒಯ್ಯುತ್ತಾರೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಯಾರೇ ಆಗಲಿ ರೈತರಿಗೆ ಯಾವುದೇ ತಕರಾರು ಕೊಟ್ಟರೆ ಅದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ತಪ್ಪುಗಳು ಆಗಿದ್ದರೆ ಅರಣ್ಯ ಅಧಿಕಾರಿಗಳ ಮೇಲೆ ಕೂಡ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಸಂತ ಬಂಗೇರ.—ಒಂದು ವಿಷಯ ಅವರು ಹೇಳಿದರು. ಇಲಾಖಾಧಿಕಾರಿಗಳಂ ನಿಗದಿ ಪಡಿಸಿದ ಬೆಲೆಗೆ ಯಾವ ಆಧಾರದ ಮೇಲೆ, ಯಾವ ರೀತಿ ಬೆಲೆಯನ್ನು ನಿಗದಿ ಪಡಿಸುತ್ತಾರೆ, ಯಾರು ನಿರ್ಣಯ ಮಾಡಿದ್ದಾರೆ ಎನ್ನುವುದು ಒಂದಂ. ಎರಡನೆಯದು, ಬಹಿರಂಗವಾಗಿ ಯಾಕೆ ಹರಾಜು ಮಾಡಬಾರದಂ ಎಂದು ಇದರ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಡಬೇಕು. ಮೂರನೆಯದಾಗಿ, ಕಾಡು ಪ್ರಾಣಿಗಳಿಂದ ಬೆಳೆಗೆ ಹಾಗೂ ಜನರ ಪ್ರಾಣಕ್ಕೆ ನಷ್ಟ ಸಂಭವಿಸುವ ಸಂಭವ ಉಂಟು. ಈ ಬಗ್ಗೆ ಸರ್ಕಾರ ಪರಿಹಾರ ಕೊಡುತ್ತದೆಂದು ಹೇಳಿದ್ದೀರಿ. ಸರ್ಕಾರದ ಹತ್ತಿರ ದುಡ್ಡು ಇಲ್ಲ. ಜನರಿಗೆ ಕೋವಿ ಕೊಟ್ಟಿದ್ದಾರೆ. ಕೋವಿ ತುಕ್ಕು ಹಿಡಿದಿದೆ. ಕೋವಿ ಹೊಡೆದರೆ ಅಧಿಕಾರಿಗಳು ಕೇಸ್ ಹಾಕುತ್ತಾರೆ. ಕೋವಿಯಿಂದ ಮೊಲ ಹೊಡೆದರೆ, ಇಲಿ ಹೊಡೆದರೆ, ಹುಲಿ ಹೊಡೆದರೆ ಅಧಿಕಾರಿಗಳು ಕೇಸ್ ಹಾಕಂತ್ತಾರೆ. ರೈತರ ಬೆಳೆಯನ್ನು ಹಾಗೂ ಅವರ ಪ್ರಾಣವನ್ನು ರಕ್ಷಿಸುವ ಕಾನೂನು ಬರಬೇಕು. ಇದರಿಂದ ಸರ್ಕಾರದ ಬೊಕ್ಕಸಕ್ಕೂ ಹಣ ಉಳಿತಾಯ ಆಗುತ್ತದೆ. ಇದನ್ನು ದಯವಿಟ್ಟು ಹೇಳಿ.

ಶ್ರೀ ಜಿ. ಎಸ್. ಬಾಗಲಕೋಟ್.—ಕಾಡು ಪ್ರಾಣಿಗಳಿಂದ ಹಾನಿ ಆದವರಿಗೆ ಹಣದ ಕೊರತೆ ಬಗ್ಗೆ ಸರ್ಕಾರದವರ ಹತ್ತಿರ ದುಡ್ಡು ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಸರಿಯಲ್ಲ. ಇಂತಹ ವಿಚಾರದಲ್ಲಿ, ವಿಷಯದಲ್ಲಿ ಯಾವುದೇ ತರಹದ ಹಣಕಾಸಿನ ತೊಂದರೆ ಸರ್ಕಾರಕ್ಕೆ ಇಲ್ಲ. ಎಲ್ಲಿ ತೊಂದರೆ ಬರುತ್ತದೆ, ಅಲ್ಲಿ ಒಂದು ನಿರ್ಧಾರ ಮಾಡಿ ಹಣ ಕೊಡತಕ್ಕ ಕ್ರಮ ಏನು ಇದೆ, ಇದರ ಬಗ್ಗೆ ಹಣದ ತೊಂದರೆ ಏನೂ ಇಲ್ಲ ಇಲಾಖಾಧಿಕಾರಿಗಳಿಗೆ ಯಾವ ಆಧಾರದ ಮೇಲೆ, ಯಾಕೆ ಹೇಗೆ ಕೊಟ್ಟಿದ್ದೀರಿ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಇದು ಸಹಕಾರ ಸಂಘದ ವಿಷಯ,

ಬಹಿರಂಗ ಹರಾಜು ಮಾಡುವ ವಿಷಯದಲ್ಲಿ ಇದನ್ನು ಪರಿಶಿಷ್ಟ ಜನಾಂಗದವರಿಗೆ ಕೊಡಬೇಕೆಂದು ನಿರ್ಣಯ ಇರುವುದರಿಂದ ಅವರಿಗೆ ಪರಿಹಾರ ಕೊಡಬೇಕೆಂದು ಇದನ್ನು ಕೊಟ್ಟಿದ್ದೇವೆ. ಅಲ್ಲದೆ ಬೆಲೆ ನಿಗದಿ ಪಡಿಸುವ ವಿಷಯದಲ್ಲಿ ಹಿಂದಿನ ವರ್ಷದ ಸರಾಸರಿ ಆಧಾರದ ಮೇಲೆ ಮಾಡುತ್ತೇವೆಯೇ ವಿನಹ, ಮಾನ್ಯ ಸದಸ್ಯರು ಹೇಳುವಂತೆ ಇದರಲ್ಲಿ ನೇರವಾಗಿ ಅಧಿಕಾರಿಗಳ ಯಾವುದೇ ತರಹ ಹಸ್ತಕ್ಷೇಪ ಇಲ್ಲ ವೆಂದು ಸ್ಪಷ್ಟಪಡಿಸುತ್ತೇನೆ.

ಕೈಮಗ್ಗ ನಿಗಮದ ಉತ್ಪಾದನೆ ಬಗ್ಗೆ

೭೪೯. ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ) — ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಕೈಮಗ್ಗ ನಿಗಮದ ಆಶ್ರಯದಲ್ಲಿರುವ ಹಾಗೂ ಕೈಮಗ್ಗ ಯೋಜನೆಯಲ್ಲಿರುವ ಕೈಮಗ್ಗಗಳೆಷ್ಟು ಇವುಗಳಲ್ಲಿ ಸಕ್ರೀಯವಾಗಿ ಕೆಲಸ ಮಾಡುತ್ತಿರುವ ನೌಕರ ಸಂಖ್ಯೆ ಎಷ್ಟು?

ಆ) ಸದರಿ ಯೋಜನೆಗಳಲ್ಲಿ ಉತ್ಪಾದನೆಯಾಗುವ ಬಟ್ಟೆಗಳ ಪ್ರಮಾಣವೆಷ್ಟು ೧೯೮೬–೮೭ರಲ್ಲಿ ಆದ ಉತ್ಪಾದನೆ ಎಷ್ಟು ?

ಇ) ಹಾಗೂ ಸದರಿ ಯೋಜನೆಗಳಿಗೆ ಖರೀದಿಸಿದ ನೂಲಿನ ಹಣ ಪಾವತಿಯು ಉಳಿದ ಮೊತ್ತವೆಷ್ಟು ? ಯೋಜನಾವಾರು ವಿವರಗಳನ್ನು ನೀಡುವುದು.

ಶ್ರೀ ಬಿ. ಎ. ಜೀವಿಜಯ (ಸಣ್ಣ ಕೈಗಾರಿಕೆಗಳ ಸಚಿವರು).—

ಅ) ಜೂನ್ ಅಂತ್ಯದವರೆಗೆ ರಾಜ್ಯದ ಕೈಮಗ್ಗ ನಿಗಮದ ಆಶ್ರಯದಲ್ಲಿರುವ ಹಾಗೂ ಕೈಮಗ್ಗ ಯೋಜನೆಯಲ್ಲಿರುವ ಕೈಮಗ್ಗಗಳ ಸಂಖ್ಯೆ–೨೭೬೦೭. ಇವುಗಳಲ್ಲಿ ಸಕ್ರೀಯವಾಗಿ ಕೆಲಸ ಮಾಡುತ್ತಿರುವ ನೇಕಾರರ ಸಂಖ್ಯೆ–೧೯೦೬೦ ಹಾಗೂ ನೌಕರರ ಸಂಖ್ಯೆ–೬೪೯.

ಆ) ಸದರಿ ಯೋಜನೆಗಳಲ್ಲಿ ಪ್ರತಿ ತಿಂಗಳೂ ಒಟ್ಟು ೨೮.೫ ಲಕ್ಷ ಮೀಟರ್‌ಗಳಷ್ಟು ಪ್ರಮಾಣದ ಬಟ್ಟೆಯ ಉತ್ಪಾದನೆಯಾಗುತ್ತಿದೆ. ೧೯೮೬–೮೭ನೇ ಸಾಲಿನಲ್ಲಿ ಉತ್ಪಾದಿಸಿದ ಬಟ್ಟೆಯ ಪ್ರಮಾಣ ೨೮೬.೪೦ ಲಕ್ಷ ಮೀಟರ್‌ಗಳಷ್ಟಿರುತ್ತದೆ.

ಇ) ಸದರಿ ಯೋಜನೆಗಳಿಗೆ ಖರೀದಿಸಿದ ನೂಲಿನ ಹಣ ಪಾವತಿಯು ಉಳಿದ ಮೊತ್ತ ರೂ. ೨೦೪.೦೮ ಲಕ್ಷಗಳಷ್ಟಿದೆ (ಆಗಸ್ಟ್ ಕೊನೆಯಲ್ಲಿ) ಯೋಜನಾವಾರು ವಿವರಗಳನ್ನು ಒದಗಿಸಲು ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ.

THE KARNATAKA DEVELOPMENT CORPORATION LIMITED
PRODUCTION OF CLOTH DURING 1986–87

		Qty. in lakh metres	Value in Lakh Rs.
1.	I.H.D.P. Banhatti	115.71	564.39
2.	I.H.D.P. Ilkal	13.51	78.98
3.	I.H.D.P. Gulbarga	65.28	327.85
4.	I.H.D.P Chitradurga	54.57	269.61
5.	I.H.D P. Hassan	4.55	33.37
6.	E.O.C.P. Gadag Betgeri	28.08	193.35
7.	E.O.S.P. Bangalore	4.74	298.86
	Total	286.40	1.766.41